**ಬಿ.ಪಿ.ಬಿ ಸರ್ಕಾರಿ ಪ್ರೌಢಶಾಲೆ, ಮಲ್ಲಂದೂರು, ಚಿಕ್ಕಮಗಳೂರು ತಾ||** **ಪ್ರಶಾಂತ ಎಸ್.ಬಿ, ಸ.ಶಿ**

| ಕಶೇರುಕಗಳ ವರ್ಗಗಳು & ಉದಾಹರಣೆಗಳು | ರಕ್ತದ ವಿಧ | ಹೃದಯದ ಕೋಣೆಗಳ ಸಂಖ್ಯೆ | ಸಂತಾನೋತ್ಪತ್ತಿ | ಉಸಿರಾಟದ ಅಂಗ | ನರಮಂಡಲ ವ್ಯವಸ್ಥೆ | ಪ್ರಮುಖ ಲಕ್ಷಣಗಳು |
|---|---|---|---|---|---|---|
| **1. ಮೀನುಗಳು**<br>ಉದಾ: ಶಾರ್ಕ್, ರೇ ಮೀನು, ಹಿಪ್ಪೋಕ್ಯಾಂಪಸ್, ಕಾರ್ಪ್, ಲೇಬಿಯೋ, ಹಿಪ್ಪೋಕ್ಯಾಂಪಸ್ | ಶೀತ ರಕ್ತ | 2 ಕೋಣೆ | **ಅಂಡಜ** (ಮೊಟ್ಟೆ ಇಡುತ್ತದೆ)<br>[ನಿಶೇಚನ & ಬೆಳವಣಿಗೆ ಎರಡೂ ದೇಹದ ಹೊರಗೆ ] | ಕಿವಿರುಗಳು | 10 ಜೊತೆ ಮಿದುಳು ನರಗಳು | * ದೇಹ ಕದಿರಿನಾಕಾರದಲ್ಲಿದ್ದು ದೇಹದ ಮೇಲೆ ಫಲಕಗಳಿಂದಾದ ಹೊರಕಂಕಾಲವಿದೆ.<br>* ಜೋಡಿಯಾದ ಮತ್ತು ಜೋಡಿಯಲ್ಲದ ಈಜುರೆಕ್ಕೆಗಳಿವೆ.<br>* ಉಸಿರಾಟದ ಅಂಗ ಕಿವಿರುಗಳು. |
| **2. ಉಭಯವಾಸಿಗಳು**<br>ಉದಾ: ಕಪ್ಪೆ, ಸ್ಯಲಮ್ಯಾಂಡರ್, ನ್ಯೂಟ್, ಇಕ್ತಿಯೋಫಿಸ್ (ಹಿತ್ತಲ ಮಂಡಲ) | ಶೀತ ರಕ್ತ | 3 ಕೋಣೆ | **ಅಂಡಜ**<br>[ ನಿಶೇಚನ & ಬೆಳವಣಿಗೆ ಎರಡೂ ದೇಹದ ಹೊರಗೆ ] | ಕಿವಿರುಗಳು, ಶ್ವಾಸಕೋಶಗಳು , ಒದ್ದೆ ಚರ್ಮ | 10 ಜೊತೆ ಮಿದುಳು ನರಗಳು | * ಚರ್ಮ ನುಣುಪಾಗಿ ತೇವವಾಗಿರುತ್ತದೆ. (ಹೊರ ಕಂಕಾಲವಿಲ್ಲ)<br>* ರೂಪ ಪರಿವರ್ತನೆ ಕಂಡುಬರುತ್ತದೆ. (ಬೆಳವಣಿಗೆಯಲ್ಲಿ ಡಿಂಬವು ಪ್ರೌಢಾವಸ್ಥೆಗೆ ಬದಲಾಗುವ ಪ್ರಕ್ರಿಯೆ)<br>* ಒಂದು ಜೊತೆ ಮುಂಗಾಲುಗಳಲ್ಲಿ ತಲಾ 4 ಬೆರಳುಗಳು & ಒಂದು ಜೊತೆ ಹಿಂಗಾಲುಗಳಲ್ಲಿ ತಲಾ 5 ಬೆರಳಗಳನ್ನು ಹೊಂದಿವೆ. |
| **3. ಸರೀಸೃಪಗಳು**<br>ಉದಾ: ಆಮೆ,ಹಲ್ಲಿ ಹಾವುಗಳು, ಡ್ರಯೋಫಿಸ್, ಮೊಸಳೆ, ಕೆಲೋಟಿಸ್ | ಶೀತ ರಕ್ತ | 3 ಕೋಣೆ | **ಅಂಡಜ**<br>[ ನಿಶೇಚನ ದೇಹದ ಒಳಗೆ, & ಬೆಳವಣಿಗೆ ದೇಹದ ಹೊರಗೆ ] | ಶ್ವಾಸಕೋಶ | 12 ಜೊತೆ ಮಿದುಳು ನರಗಳು | * ಹೊರಕಂಕಾಲವು ತಟ್ಟೆಯಾಕಾರದ ಫಲಕಗಳಿಂದಾಗಿದೆ.<br>* ಒಂದು ಜೊತೆ ಮುಂಗಾಲುಗಳಲ್ಲಿ ತಲಾ 5 ಬೆರಳುಗಳು & ಒಂದು ಜೊತೆ ಹಿಂಗಾಲುಗಳಲ್ಲಿ ತಲಾ 5 ಬೆರಳಗಳನ್ನು ಹೊಂದಿವೆ. |
| **4. ಪಕ್ಷಿಗಳು**<br>ಉದಾ : ಆಸ್ಟ್ರಿಚ್, ಕಿವಿ,ರಿಯಾ ಫ್ಲೆಮಿಂಗೋ, ಎಮು, ಪೆಂಗ್ವಿನ್ | ಉಷ್ಣ ರಕ್ತ | 4 ಕೋಣೆ | **ಅಂಡಜ**<br>[ನಿಶೇಚನ ದೇಹದ ಒಳಗೆ, & ಬೆಳವಣಿಗೆ ದೇಹದ ಹೊರಗೆ] | ಶ್ವಾಸಕೋಶ | 12 ಜೊತೆ ಮಿದುಳು ನರಗಳು | *ಹೊರಕಂಕಾಲವು ಚರ್ಮದಿಂದ ಹೊರಚಾಚಿದ ಗರಿಗಳಿಂದ ಕೂಡಿದೆ.<br>* ಮುಂಗಾಲುಗಳು ಹಾರಾಟಕ್ಕಾಗಿ ರೆಕ್ಕೆಗಳಾಗಿ ಮಾರ್ಪಟ್ಟಿವೆ.<br>* ಗಾಳಿಯಿಂದ ತುಂಬಿದ ವಾಯುವಿಕ ಮೂಳೆಗಳನ್ನು ಹೊಂದಿವೆ. |
| **5. ಸ್ತನಿಗಳು**<br>ಉದಾ : ಬಾವಲಿ, ಲೆಮೂರ್, ತಿಮಿಂಗಿಲ, ಡಾಲ್ಫಿನ್, ಹುಲಿ, ಎಕಿಡ್ನ, ಪ್ಲಾಟಿಪಸ್, ಕಾಂಗರೂ... | ಉಷ್ಣ ರಕ್ತ | 4 ಕೋಣೆ | **ಜರಾಯುಜ** (ಮರಿ ಹಾಕುತ್ತದೆ)<br>[ ನಿಶೇಚನ & ಬೆಳವಣಿಗೆ ಎರಡೂ ದೇಹದ ಒಳಗೆ ] | ಶ್ವಾಸಕೋಶ | 12 ಜೊತೆ ಮಿದುಳು ನರಗಳು | * ಮರಿಗಳ ಪೋಷಣೆಗಾಗಿ ಹಾಲನ್ನು ಸ್ರವಿಸುವ ಸ್ತನ್ಯಗ್ರಂಥಿಗಳಿವೆ.<br>* ಎದೆ ಮತ್ತು ಉದರದ ನಡುವೆ **ವಪೆ** ಎಂಬ ಸ್ನಾಯುಕ ಪೊರೆ ಇದೆ.<br>* ಮುಂಗಾಲುಗಳು & ಹಿಂಗಾಲುಗಳಲ್ಲಿ ತಲಾ 5 ಬೆರಳಗಳನ್ನು ಹೊಂದಿದ್ದು, ಬೆರಳುಗಳ ತುದಿಗಳಲ್ಲಿ ಉಗುರುಗಳಿವೆ. |